KACN020026812022

**ಪ್ರಧಾನ ಹಿರಿಯ ಸಿವಿಲ್  ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ನ್ಯಾಯಾಲಯ, ಚಾಮರಾಜನಗರ.**

**ದಿನಾಂಕಃ 08ನೇ ಡಿಸೆಂಬರ್ ಮಾಹೆ 2025**

**ಉಪಸ್ಥಿತರು**

**ಶ್ರೀ ಪ್ರಕಾಶ್ .ಸಿ.ಡಿ,** ಬಿ.ಎ. ಎಲ್ ಎಲ್. ಬಿ.,
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.
ಚಾಮರಾಜನಗರ.

**ಸಿ ಸಿ ಸಂ. 1633/2022**

**ಫಿರ್ಯಾದುದಾರರು:** **ಸರ್ಕಾರದ ಪರವಾಗಿ ಗ್ರಾಮಾಂತರ ಪೊಲೀಸ್ ಠಾಣೆ, ಚಾಮರಾಜನಗರ**

(ಪ್ರತಿನಿಧಿಸುವವರು ಸಹಾಯಕ ಸರ್ಕಾರಿ ಅಭಿಯೋಜಕರು)

:: **ವಿರುದ್ಧ** ::

**ಆರೋಪಿ :** **ಶಕ್ತಿವೇಲು**
ಬಿನ್ ಕೃಷ್ಣನ್
ವಯಸ್ಸುಃ 38 ವರ್ಷ,
ವಾಸಃ ಪಲ್ಲಿಯತ್ತು ಗ್ರಾಮ,
ಪೊಂದುರೈ,
ಈರೋಡು ಜಿಲ್ಲೆ
ತಮಿಳುನಾಡು ರಾಜ್ಯ

**(ಆರೋಪಿ ಪರಃ ಶ್ರೀ ಎ.ವಿ ., ವಕೀಲರು)**

**ಘಟನೆಗಳ ವಿವರಃ**

| | | |
|---|---|---|
| ಪ್ರಕರಣ ದಾಖಲಾದ ದಿನಾಂಕ | : | 10.10.2022 |
| ಪ್ರಕರಣದ ಸ್ವರೂಪ | : | ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 32, 34 |
| ವಿಚಾರಣೆ ಪ್ರಾರಂಭವಾದ ದಿನಾಂಕ | : | 11.09.2025 |
| ವಿಚಾರಣೆ ಮುಕ್ತಾಯವಾದ ದಿನಾಂಕ | : | 29.09.2025 |
| ತೀರ್ಪು ನೀಡಿದ ದಿನಾಂಕ | : | **08.12.2025** |
| ಪ್ರಕರಣದ ಒಟ್ಟು ಕಾಲಾವಧಿ | : | ವರ್ಷ ತಿಂಗಳು ದಿನ<br>3 1 28 |

**(ಶ್ರೀ ಪ್ರಕಾಶ್. ಸಿ.ಡಿ )**
**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ ಜೆ ಎಂ.**
**ಚಾಮರಾಜನಗರ**

**:: ತೀರ್ಪು ::**

ಆರೋಪಿ ವಿರುದ್ದ ಗ್ರಾಮಾಂತರ ಪೊಲೀಸ್ ಠಾಣೆ, ಚಾಮರಾಜನಗರ ರವರು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 32, 34ರ ಅಡಿಯಲ್ಲಿ ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರಗಳು ಈ ಕೆಳಕಂಡಂತಿರುತ್ತದೆ.**

ದಿನಾಂಕ 08.06.2021 ರಂದು ಬೆಳಿಗ್ಗೆ 11.50 ರ ಸಮಯದಲ್ಲಿ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು, ಅಮಚವಾಡಿ ಗ್ರಾಮದ ಪೆಟ್ರೋಲ್ ಬಂಕ್ ಬಳಿ ಆರೋಪಿಯು ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 750 ಎಂ.ಎಲ್ ನ ಒರಿಜನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ ಮದ್ಯ ತುಂಬಿರುವ ಒಟ್ಟು 12 ಬಾಟಲ್ ಗಳನ್ನು ಯಾವುದೇ ರಹದಾರಿ ಇಲ್ಲದೆ ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದುದು, ಆರೋಪಿ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 32, 34 ರ ಅಡಿಯಲ್ಲಿ ಅಪರಾಧ ಸಂಖ್ಯೆ

79/2021 ರಂತೆ ಪ್ರಕರಣವನ್ನು ನೋಂದಾಯಿಸಿ ನಂತರ ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

**3**.ತನಿಖಾಧಿಕಾರಿಯು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ನಂತರ ನ್ಯಾಯಾಲಯವು ಸದರಿ ಪ್ರಕರಣದಲ್ಲಿ ಆರೋಪಿತರ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 32, 34 ರಡಿಯಲ್ಲಿ ಸಂಜ್ಞೆಯನ್ನು ತೆಗೆದುಕೊಂಡಿರುತ್ತದೆ.

**4.** ಆರೋಪಿಯು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ. ಆರೋಪಿತರಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಅಡಿಯಲ್ಲಿ ಅಭಿಯೋಜನೆಯ ದಾಖಲೆಗಳನ್ನು ಪೂರೈಸಲಾಗಿದೆ. ನಂತರ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 1965 ರ ಕಲಂ 32, 34 ರ ಅಡಿಯಲ್ಲಿ ಆರೋಪಿಯ ವಿರುದ್ಧ ಆಪಾದನೆಯನ್ನು ರಚಿಸಿ ಓದಿ ಹೇಳಲಾಗಿರುತ್ತದೆ. ಆರೋಪಿತರನ್ನು ತಪ್ಪನ್ನು ಒಪ್ಪಿಕೊಳ್ಳದೇ ವಿಚಾರಣೆಯಾಗಬೇಕೆಂದು ತಿಳಿಸಿರುತ್ತಾರೆ.

**5.** ನಂತರ ಅಭಿಯೋಜನೆಯವರು ತಮ್ಮ ಪರ ಫ್ರಾಸಾ 1 ರಿಂದ 4 ರವರೆಗೆ ನ್ಯಾಯಾಲಯದ ಮುಂದೆ ವಿಚಾರಣೆ ಮಾಡಿಕೊಂಡು, ನಿಪಿ 1 ರಿಂದ 9 ರವರೆಗೆ ನಿಶಾನೆಗಳನ್ನಾಗಿ ಹಾಗೂ 4 ನಾಲ್ಕು ಬ್ರಾಂದಿಯ ಬಾಟಲ್ ಗಳು ಹಾಗೂ ಪ್ಲಾಸ್ಟಿಕ್ ಚೀಲವನ್ನು ಮುದ್ದೆ ಮಾಲು-1 ರಿಂದ 5 ಎಂದು ಗುರ್ತಿಸಿಕೊಂಡಿರುತ್ತಾರೆ. ಫ್ರಾಸಾ-1 ಮತ್ತು 4 ರವರು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಆರೋಪಿ ವಿರುದ್ಧ ದಂ.ಪ್ರ.ಸಂ.ಕಲಂ 313 ರ ರೀತ್ಯಾ ಪಡೆದುಕೊಳ್ಳಬೇಕಾದ ಆರೋಪಿ ಹೇಳಿಕೆಯನ್ನು ತೆಗೆದುಕೊಳ್ಳಲಾಯಿತು, ಆರೋಪಿತಯು ಸಾಕ್ಷ್ಯದಾರರು ನುಡಿದಿರುವ ಸಾಕ್ಷ್ಯವನ್ನು ಅಲ್ಲಗಳೆದಿರುತ್ತಾರೆ. ಆರೋಪಿತರು ತಮ್ಮ ಪರವಾಗಿ ಸಾಕ್ಷಿಯನ್ನು ಮಂಡಿಸಿರುವುದಿಲ್ಲ ಮತ್ತು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ.

6. ಅಭಿಯೋಜನೆ ಹಾಗೂ ಆರೋಪಿ ಪರವಾಗಿ ವಾದವನ್ನು ಆಲಿಸಲಾಯಿತು. ಕೆಳಕಂಡ ಅಂಶಗಳು ಪ್ರಕರಣದ ಇತ್ಯರ್ಥಕ್ಕಾಗಿ ಮೂಡಿಬಂದಿತು.

1. ದಿನಾಂಕ 08.06.2021 ರಂದು ಬೆಳಿಗ್ಗೆ 11.50 ರ ಸಮಯದಲ್ಲಿ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು, ಅಮಚವಾಡಿ ಗ್ರಾಮದ ಪೆಟ್ರೋಲ್ ಬಂಕ್ ಬಳಿ ಆರೋಪಿಯು ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 750 ಎಂ.ಎಲ್ ನ ಓರಿಜನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ ಮದ್ಯ ತುಂಬಿರುವ ಒಟ್ಟು 12 ಬಾಟಲ್ ಗಳನ್ನು ಯಾವುದೇ ರಹದಾರಿ ಇಲ್ಲದೆ ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದುದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯಿದೆ ಕಲಂ. 32, 34 ರಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿರುವುದಾಗಿ ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುವರೇ?

2. ಯಾವ ಆದೇಶ?

7. ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ ಸಂಖ್ಯೆ : 1 :ನಕರಾತ್ಮಕವಾಗಿ.

ಅಂಶ ಸಂಖ್ಯೆ : 2 : ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿ,

## ಕಾರಣಗಳು

8. **ಅಂಶ ಸಂಖ್ಯೆ: 1** : ಅಭಿಯೊಜನೆಯವರು ಆರೊಪಿತರು ಮೇಲೆ ಇರುವ ಆರೋಪವನ್ನು ಸಾಬೀತು ಪಡಿಸಲು ಅಭಿಯೋಜನೆಯವರು ತಾವು ಹಾಜರು ಪಡಿಸಿದ ಸಾಕ್ಷಿದಾರರ ಪಟ್ಟಿಯಲ್ಲಿನ ತಮ್ಮ ಪರ 1 ರಿಂದ 4 ರವರೆಗೆ ನ್ಯಾಯಾಲಯದ ಮುಂದೆ ವಿಚಾರಣೆ ಮಾಡಿಕೊಂಡು, ನಿಪಿ 1 ರಿಂದ 9 ರವರೆಗೆ ನಿಶಾನೆಗಳನ್ನಾಗಿ ಹಾಗೂ 4 ನಾಲ್ಕು ಬ್ರಾಂದಿಯ ಬಾಟಲ್ ಗಳು ಹಾಗೂ ಪ್ಲಾಸ್ಟಿಕ್ ಚೀಲವನ್ನು ಮುದ್ದೆ ಮಾಲು-1 ರಿಂದ 5 ಎಂದು ಗುರ್ತಿಸಿಕೊಂಡಿರುತ್ತಾರೆ. ಸದರಿ ದಾಖಲೆಗಳನ್ನು ಪರಿಶೀಲಿಸಿದಾಗ, ನಿಪಿ.1 ಸ್ಥಳ ಮಹಜರ್, ದಿನಾಂಕ 08.06.2021 ರಂದು

ಚಾಮರಾಜನಗರ ತಾಲ್ಲೂಕು, ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿ, ಅಮಚವಾಡಿ ಗ್ರಾಮದ ಶಿವಸ್ವಾಮಿ ಎಂಬುವವರ ಜಮೀನಿನ ಬಳಿ ಪಂಚಾಯ್ತುದಾರರ ಸಮಕ್ಷಮ ನಡೆಸಿದ ಅಮಾನತ್ತು ಮಹಜರ್ ಕ್ರಮವಾಗಿರುತ್ತದೆ. ನಿಪಿ.2 ಮತ್ತು 3 ಹೇಳಿಕೆಗಳು.

**9.** ನಿಪಿ.4 ಸ್ವವರದಿ, ದಿನಾಂಕ 08.06.2021 ರಂದು ಸಮಯ ಸಂಜೆ 1.30ಗಂಟೆ ಸಮಯಲ್ಲಿ ಕರ್ನಾಟಕ ಅಬಕಾರಿ ಕಾಯಿದೆ ಕಲಂ. 32, 34 ರಂತೆ ಪ್ರಕರಣದ ಸಂಖ್ಯೆ 79/2021 ರಂತೆ ಪ್ರಕರಣ ದಾಖಲಾಗಿರುತ್ತದೆ ನಿಪಿ.5 ಪ್ರಾದೇಶಿಕ ವಿಧಿವಿಜ್ಞಾನ ಪ್ರಯೋಗಾಲಯದ ವರದಿಯಾಗಿರುತ್ತದೆ. ನಿಪಿ.6 ಪ್ರ.ವ.ವರದಿ, ನಿಪಿ.7 ಮಾಲುಗಳನ್ನು ವಶಕ್ಕೆ ನೀಡುತ್ತಿರುವ ಬಗ್ಗೆ ಗ್ರಾಮಾಂತರ ಪೊಲೀಸ್ ಠಾಣೆಯವರು ಅಬಕಾರಿ ನಿರೀಕ್ಷಕರಿಗೆ ಬರೆದ ಪತ್ರ. ನಿಪಿ.8 ಸ್ವತ್ತಿನ ಪಟ್ಟಿಯಾಗಿರುತ್ತದೆ. ನಿಪಿ.9 ಅಂತಿಮ ವರದಿಯಾಗಿರುತ್ತದೆ. ಸದರಿ ನಿಪ.9 ರಲ್ಲಿ ಆರೋಪಿ ವಿರುದ್ಧ ಪ್ರಕರಣ ದಾಖಲಾಗಿರುತ್ತದೆ. ಸದರಿ ನಿಶಾನೆಗಳ ಬಗ್ಗೆ ಯಾವುದೇ ವಿವಾದಗಳು ಇರುವುದಿಲ್ಲ.

**10.** ಪ್ರಾಸಾ-2 ಮತ್ತು 3 ಪಂಚರ ಸಾಕ್ಷಿದಾರರಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಮಗೆ ಆರೋಪಿ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಯಾವುದೇ ಹೇಳಿಕೆ ನೀಡಿರುವುದಿಲ್ಲ. ನಿಪಿ-1ಕ್ಕೆ ಮೂರು ವರ್ಷ ಗಳ ಹಿಂದೆ ಪೋಲಿಸರ ಕೋರಿಕೆ ಮೇರೆಗೆ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರಗಳು ತಮಗೆ ಗೊತ್ತಿರುವುದಿಲ್ಲ. ತಮ್ಮ ಸಮಕ್ಷಮ ಪೋಲಿಸರು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಯಾವುದೇ ಮಹಜರ್ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಮಹಜರ್ ನ್ನು ನಿಪಿ-1 ಎಂದು, ತಮ್ಮ ಸಹಿಯನ್ನು ನಿಪಿ. 1(ಎ) ಮತ್ತು 1(ಬಿ) ಎಂದು ಗುರುತಿಸಿಕೊಂಡಿದ್ದಾರೆ. ಮುದ್ದೆ ಮಾಲು 1ರಿಂದ 5 ಗುರುತಿಸಿಕೊಂಡಿರುವುದಿಲ್ಲ.

**10(ಬಿ)**. ನಂತರ ಅಭಿಯೋಜಕರು ಪ್ರಾಸಾ-2 ಮತ್ತು 3 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಿವರವಾಗಿ ಪಾಟೀ ಸವಾಲು ಮಾಡಿದರೂ ಸಹ ಪಾಟೀ ಸವಾಲಿನಲ್ಲಿ ಮಾಡಿದ ಸಲಹಗೆಳನ್ನು ನಿರಾಕರಿಸಿರುತ್ತಾರೆ. ಸದರಿ ಸಾಕ್ಷಿದಾರರು ಪ್ರಕರಣದ ಮಹಜರ್ ನ ಪಂಚರಾಗಿದ್ದು, ಇವರು ಪ್ರಮುಖ ಸಾಕ್ಷಿದಾರರಾಗಿದ್ದರೂ ಸಹ ಅಭಿಯೋಜನೆ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿರುವುದು ಕಂಡುಬರುತ್ತದೆ.

**11.** ಪ್ರಾಸಾ-1 ರವರು ದಾಳಿ ಕಾಲದಲ್ಲಿ ಹಾಜರಿದ್ದ ಸಾಕ್ಷಿದಾರರಾಗಿದ್ದು, ಇವರು ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 08.06.2021ರಂದು ಬೆಳಿಗ್ಗೆ 11.30 ಗಂಟೆ ಸಮಯದಲ್ಲಿ ತಾನು ಮತ್ತು ಚಾಸಾ-5,6 ರವರು ಠಾಣೆಯಲ್ಲಿದ್ದಾಗ ಚಾಸಾ-1ರವರು ತಮ್ಮನ್ನು ಕರೆದು ಅಮಚವಾಡಿ ಗ್ರಾವದ ಕಡೆಗೆ ಒಬ್ಬ ಆಸಾಮಿಯು ಅಕ್ರಮವಾಗಿ ಮದ್ಯ ಸಾಗಾಣಿಕೆ ಮಾಡುತ್ತಿರುವ ಬಗ್ಗೆ ತಮಗೆ ಮಾಹಿತಿ ಬಂದಿರುವ ವಿಚಾರ ತಿಳಿಸಿ, ನಮ್ಮನ್ನು ಕರೆದುಕೊಂಡು ಇಲಾಹಾ ಜೀಪಿನಲ್ಲಿ ಹೊರಟು, ಮಾರ್ಗ ಮಧ್ಯೆ ಚಾಸಾ-2 ಮತ್ತು 3ರವರನ್ನು ಕರೆದು ಅವರಿಗೂ ಈ ಪ್ರಕರಣದ ವಿಚಾರ ತಿಳಿಸಿ ಪಂಚರಾಗಲು ಕೋರಿದ್ದು, ಅವರು ಒಪ್ಪಿಕೊಂಡ ಮೇರೆಗೆ ಅವರನ್ನು ಸಹ ಜೊತೆಯಲ್ಲಿ ಕರೆದುಕೊಂಡು ಬೆಳಿಗ್ಗೆ 11.50 ಗಂಟೆ ಸಮಯಕ್ಕೆ ಅಮಚವಾಡಿ ಗ್ರಾಮ ಪೆಟ್ರೋಲ್ ಬಂಕ್ ಬಳಿ ಹೋಗಿ ಜೀಪನ್ನು ಮರೆಯಾಗಿ ನಿಲ್ಲಿಸಿ ಕಾಯುತ್ತಿದ್ದೆವು ಎಂದು ನುಡಿದಿದಿರುತ್ತಾರೆ. ಮಹಜರ್ ನ್ನು ನಿಪಿ.1 ಎಂದು, ತನ್ನ ಸಹಿಯ್ನುನು ನಿಪಿ.1(ಎ) ಎಂದು ಹಾಗೂ ನಾಲ್ಕು ಬ್ರಾಂದಿಯ ಬಾಟಲ್ ಗಳನ್ನು ಮತ್ತು ಒಂದು ಪ್ಲಾಸ್ಟಿಕ್ ಚೀಲವನ್ನು ಮುದ್ದೆ ಮಾಲು 1 ರಿಂದ 5 ಎಂದು ಗುರುತಿಸಿಕೊಂಡಿದ್ದಾರೆ.

**11(ಎ).** ಪ್ರಾಸಾ -1 ರವರು ಮುಂದುವರಿದು ಮಧ್ಯಾಹ್ನ 12 ಗಂಟೆ ಸಮಯಕ್ಕೆ ಒಬ್ಬ ಆಸಾಮಿಯು ಅಮಚವಾಡಿ ಮುಖ್ಯರಸ್ತೆಯಲ್ಲಿಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನುಹೆಗಲ ಮೇಲೆ ಹೊತ್ತುಕೊಂಡು ಬರುತ್ತಿದ್ದು ಆತನನ್ನು ತಡೆದು ವಿಚಾರ ಮಾಡಲಾಗಿ ತನ್ನ ಹೆಸರು ಶಕ್ತಿವೇಲು ಬಿನ್

ಕೃಷ್ಣನ್ ಎಂದು ತಿಳಿಸಿದ್ದು, ಆತನ ಬಳಿ ಇದ್ದ ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಲಾಗಿ ಒಂದು ರಟ್ಟಿನ ಬಾಕ್ಸಿನಲ್ಲಿ 750 ಎಂ.ಎಲ್. ನ ಒರಿಜಿನಲ್ ಚಾಯ್ಸ್ ಬ್ರಾಂಡಿನ 12 ಬ್ರಾಂದಿಯ ಬಾಟಲ್ ಗಳು ಇರುತ್ತವೆ ಎಂದು ನುಡಿದಿರುತ್ತಾರೆ.

**11(ಬಿ).** ಫ್ರಾಸಾ -1 ರವರು ಮುಂದುವರಿದು ಅಸಾಮಿಯನ್ನು ರಹದಾರಿ ಕೇಳಲಾಗಿ, ಯಾವುದೇ ರಹದಾರಿ ಇಲ್ಲ ಎಂದು ಆರೋಪಿ ತಿಳಿಸಿದ ಮೇರೆಗೆ ಮಧ್ಯಾಹ್ನ 12.15 ಗಂಟೆಯಿಂದ 1 ಗಂಟೆಯವರೆಗೆ ಮಹಜರ್ ಜರುಗಿಸಿ, ಚಾಸಾ-2 ಮತ್ತು 3 ರವರ ಸಮಕ್ಷಮ ಸದರಿ ಮದ್ಯದ ಬಾಟಲ್ ಗಳನ್ನು ಮತ್ತು ಪ್ಲಾಸ್ಟಿಕ್ ಚೀಲವನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ ಮತ್ತು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ನಾಲ್ಕು ಬ್ರಾಂದಿಯ ಪ್ಲಾಸ್ಟಿಕ್ ಬಾಟಲ್ ಗಳನ್ನು ಮಾದರಿ ತೆಗೆದು ಬಿಳಿ ಬಟ್ಟೆ ಚೀಲದಿಂದ ಅವುಗಳನ್ನು ಸುತ್ತಿ ಕ್ಯೂ ಎಂಬ ಅಕ್ಷರದಿಂದ ಸೀಲು ಮಾಡಿರುತ್ತೇವೆ ಎಂದು ನುಡಿದಿರುತ್ತಾರೆ.

**11(ಸಿ).** ನಂತರ ಆರೋಪಿ ಪರ ವಕೀಲರ ಪಾಟೀ ಸವಾಲಿನಲ್ಲಿ ಶಿವಸ್ವಾಮಿ ರವರ ಜಮೀನನ್ನು ಕೇಳಿ ತಿಳಿದುಕೊಂಡಿರುತ್ತೇವೆ. ಪಂಚರು ಬೆಂಡರವಾಗಿ ಗ್ರಾಮದವರು. ಬೆಂಡರವಾಡಿ ಗ್ರಾಮದಿಂದ ಪಂಚರ ಕೆಲಸಕ್ಕೆ ಬಂದಿದ್ದರು. ಪೆಟ್ರೋಲ್ ಬಂಕ್ ನಲ್ಲಿ ಜನದಟ್ಟನೆ ಇರುತ್ತದೆ ಎಂದು ನುಡಿದು ಇತರೆ ಸಲಹೆಗಳನ್ನು ಅಲ್ಲಗಳೆದಿರುತ್ತಾರೆ.

**12.** ಫ್ರಾಸಾ-4 ರವರು ಫಿರ್ಯಾದುದಾರರಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 08.06.2021ರಂದು ಬೆಳಿಗ್ಗೆ 11.30 ಗಂಟೆ ಸಮಯದಲ್ಲಿ ತಾನು ಠಾಣೆಯಲ್ಲಿದ್ದಾಗ ತನಗೆ ಹರದನಹಳ್ಳಿ ಕಡೆಗೆ ಅಮಚವಾಡಿ ಗ್ರಾಮದ ಕಡೆಗೆ ಒಬ್ಬ ಆಸಾಮಿಯು ಅಕ್ರಮವಾಗಿ ಮದ್ಯ ಸಾಗಾಣಿಕೆ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿರುವ ವಿಚಾರವನ್ನು ನಮ್ಮ ಠಾಣೆಯ ಸಿಬ್ಬಂದಿಗಳಾದ ಚಾಸಾ-4 ರಿಂದ 6ರವರು ತಿಳಿಸಿ, ಅವರನ್ನು ಸಹ ಕರೆದುಕೊಂಡು ಇಲಾಖಾ ಜೀಪಿನಲ್ಲಿ ಹೊರಟು,

ಮಾರ್ಗ ಮಧ್ಯೆ ಚಾಸಾ–2 ಮತ್ತು 3ರವರನ್ನು ಕರೆದು ಅವರಿಗೂ ಈ ಪ್ರಕರಣದ ವಿಚಾರ ತಿಳಿಸಿ ಪಂಚರಾಗಲು ಕೋರಿದ್ದು, ಅವರು ಒಪ್ಪಿಕೊಂಡ ಮೇರೆಗೆ ಅವರನ್ನು ಸಹ ಜೊತೆಯಲ್ಲಿ ಕರೆದುಕೊಂಡು ಬೆಳಿಗ್ಗೆ 11.50 ಗಂಟೆ ಸಮಯಕ್ಕೆ ಅಮಚವಾಡಿ ಗ್ರಾಮ ಪೆಟ್ರೋಲ್ ಬಂಕ್ ಬಳಿ ಹೋಗಿ ಜೀಪನ್ನು ಮರೆಯಾಗಿ ನಿಲ್ಲಿಸಿ ಕಾಯುತ್ತಿದ್ದು ಎಂದು ನುಡಿದಿರುತ್ತಾರೆ.

**12(ಎ).** ಮುಂದುವರಿದು ಮಧ್ಯಾಹ್ನ 12.00 ಗಂಟೆ ಸಮಯಕ್ಕೆ ಒಬ್ಬ ಆಸಾಮಿಯು ಅಮಚವಾಡಿ ಮುಖ್ಯರಸ್ತೆಯಲ್ಲಿ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನುಹೆಗಲ ಮೇಲೆ ಹೊತ್ತುಕೊಂಡು ಬರುತ್ತಿದ್ದನು ಆಗ ಆತನನ್ನು ತಡೆದು ವಿಚಾರ ಮಾಡಲಾಗಿ ತನ್ನ ಹೆಸರು ಶಕ್ತಿವೇಲು ಬಿನ್ ಕೃಷ್ಣನ್ ಎಂದು ತಿಳಿಸಿದ್ದು, ಆತನ ಬಳಿ ಇದ್ದ ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಲಾಗಿ ಒಂದು ರಟ್ಟಿನ ಬಾಕ್ಸಿನಲ್ಲಿ 750 ಎಂ.ಎಲ್. ನ ಒರಿಜಿನಲ್ ಚಾಯ್ಸ್ ಬ್ರಾಂಡಿನ 12 ಬ್ರಾಂದಿಯ ಬಾಟಲ್ ಗಳು ಇರುತ್ತವೆ. ಆ ಬಗ್ಗೆ ರಹದಾರಿ ಕೇಳಲಾಗಿ, ಯಾವುದೇ ರಹದಾರಿ ಇಲ್ಲ ಎಂದು ಆರೋಪಿ ತಿಳಿಸಿದ ಮೇರೆಗೆ ಮಃ 12.15 ಗಂಟೆಯಿಂದ 1 ಗಂಟೆಯವರೆಗೆ ಮಹಜರ್ ಜರುಗಿಸಿ, ಚಾಸಾ–2 ಮತ್ತು 3 ರವರ ಸಮಕ್ಷಮ ಸದರಿ ಮದ್ಯದ ಬಾಟಲ್ ಗಳನ್ನು ಮತ್ತು ಪ್ಲಾಸ್ಟಿಕ್ ಚೀಲವನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ ಎಂದು ನುಡಿದಿರುತ್ತಾರೆ.

**12(ಬಿ).** ಮುಂದುವರಿದು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ 4 ಬ್ರಾಂದಿಯ ಪ್ಲಾಸ್ಟಿಕ್ ಬಾಟಲ್ ಗಳನ್ನು ಮಾದರಿ ತೆಗೆದು ಬಿಳಿ ಬಟ್ಟೆ ಚೀಲದಿಂದ ಅವುಗಳನ್ನು ಸುತ್ತಿ ಯೂ ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲು ಮಾಡಿ ಮಧ್ಯಾಹ್ನ 12 15ರಿಂದ 1.30 ರವರೆಗೆ ಮಹಜರ್ ಜರುಗಿಸಿ ಆರೋಪಿ ಮತ್ತು ಮದ್ಯವನ್ನು ವಶಪಡಿಸಿಕೊಂಡು, ಠಾಣೆಗೆ ಬಂದು ಒಂದು ಲಿಖಿತ ವರದಿಯನ್ನು ಠಾಣಾಧಿಕಾರಿಗೆ ನೀಡಿ ಅದರ ರೀತ್ಯಾ ಅಮಾನತ್ತು ಮಹಜರ್ ನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ದೂರನ್ನು ನಿಪಿ.4 ಎಂದು, ತನ್ನ ಸಹಿಯನ್ನು ನಿಪಿ.4(ಎ), ನಿಪಿ.1ರಲ್ಲಿರುವ ಸಹಿಯನ್ನು ನಿಪಿ.1(ಡಿ), ರಾಸಾಯನಿಕ ಪರೀಕ್ಷೆ ವರದಿಯನ್ನು ನಿಪಿ.5 ಎಂದು, ಸಹಿಯನ್ನು

ನಿಪಿ.5(ಎ) ಎಂದು, ಪ್ರ.ವ.ವರದಿಯನ್ನು ನಿಪಿ.6 ಎಂದು, ಅಬಕಾರಿ ಇಲಾಖೆಗೆ ಬರೆದ ಪತ್ರವನ್ನು ನಿಪಿ.7 ಎಂದು, ತನ್ನ ಸಹಿಯನ್ನು ನಿಪಿ.7(ಎ) ಎಂದು, ಮಾಲು ಪಟ್ಟಿಯನ್ನು ನಿಪಿ.8 ಎಂದು, ತನ್ನ ಸಹಿಯನ್ನು ನಿಪಿ.8(ಎ) ಮತ್ತು (ಬಿ) ಹಾಗೂ ದೋಷರೋಪಣಾ ಪತ್ರವನ್ನು ನಿಪಿ. 9 ಎಂದು, ತನ್ನ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಿಕೊಂಡಿದ್ದಾರೆ. ನಂತರ ಆರೋಪಿ ಪರ ವಕೀಲರು ಪಾಟೀ ಸವಾಲಿನಲ್ಲಿ ಮಾಡಿದ ಸಲಹಗೆಳನ್ನು ಅಲ್ಲಗಳೆದಿರುತ್ತಾರೆ.

**13**. ಮೇಲ್ಕಂಡಂತೆ, ಫ್ರಾಸಾ–1 ರಿಂದ 4 ರವರ ಸಾಕ್ಷ್ಯವನ್ನು ಗಮನಿಸಿದಾಗ, ಫ್ರಾಸಾ–2 ಮತ್ತು 3 ಅವರು, ಜಪ್ತಿ ಮಾಡಿದ ಮಹಜರ್‌ಗಳಲ್ಲಿ ಪಂಚರಾಗಿದ್ದರೂ, ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿ ಯಾರು ಎಂಬುದರ ಕುರಿತು ತಿಳಿದಿಲ್ಲವೆಂದು ಹೇಳಿದ್ದಾರೆ. ಅವರು ಜಪ್ತಿ ಅಥವಾ ಮಹಜರ್‌ಗಳಲ್ಲಿ ಭಾಗವಹಿಸಿಲ್ಲವೆಂದು ಹೇಳಿರುವುದು, ಅಭಿಯೋಜನೆಯ ಕಥನದ ಫ್ರಾಮಾಣಿಕತೆಯನ್ನು ಪ್ರಶ್ನಿಸುತ್ತದೆ. ಅವರು ಸ್ವತಃ ವ್ಯತಿರಿಕ್ತ ಸಾಕ್ಷಿಗಳಾಗಿರುವುದರಿಂದ, ಜಪ್ತಿ ಮಾಡಿದ ವಸ್ತುಗಳ ಬಗ್ಗೆ ಯಾವುದೇ ದೃಢವಾದ ದೃಷ್ಟಾಂತ ಸಾಬೀತಾಗಿಲ್ಲ. ಫ್ರಾಸಾ–1 ಮತ್ತು 4ರ ವಿವರಗಳಲ್ಲಿ ಪಂಚರ ಹಾಜರಿ ಮತ್ತು ಸ್ಥಳದ ಜನಸಂದಣಿ, ವರದಿಗಳ ನಿಖರತೆ ಬಗ್ಗೆ ಸಂಶಯ ಸೃಷ್ಟಿಸುತ್ತವೆ.

**14.** ಫ್ರಾಸಾ–2 ಮತ್ತು 3 ರವರು ಮುದ್ದೆ ಮಾಲು 1 ರಿಂದ 5 ಗುರುತಿಸಿಲ್ಲವೆಂದು ಹೇಳಿದ್ದಾರೆ. ಇದರಿಂದ ಜಪ್ತಿ ಮಾಡಿದ ವಸ್ತುಗಳ ಆರೋಪಿ ವಿರುದ್ಧ ಸಂಬಂಧ ಸಾಬೀತಾಗುತ್ತಿಲ್ಲ. ಅಭಿಯೋಜನೆಯ ಪ್ರಬಂಧದ ಮಹತ್ವಪೂರ್ಣ ಸಾಕ್ಷ್ಯವೂ ಸಂಕಷ್ಟಕ್ಕೆ ಒಳಗಾಗುತ್ತದೆ.

**15.** ವಶಪಡಿಕೆ ವಸ್ತುಗಳ ಸ್ಥಳದಿಂದ ಪ್ರಯೋಗಾಲಯದ ತನಕ ಸಾಗುವ ಪ್ರಕ್ರಿಯೆ ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿಲ್ಲ. ಚೈನ್ ಆಫ್ ಕಸ್ಟಡಿ ಸಾಬೀತಾಗದಿರುವುದು ವಶಪಡಿಕೆ ಪ್ರಮಾಣವನ್ನು ಕಾನೂನಿನ ದೃಷ್ಟಿಯಿಂದ ಸಂಶಯಾಸ್ಪದಗೊಳಿಸುತ್ತದೆ. ಅಭಿಯೋಜನೆ ಸಂಪೂರ್ಣವಾಗಿ ಪೊಲೀಸ್ ಅಧಿಕಾರಿಗಳ ಹೇಳಿಕೆಗಳ ಮೇಲೆ ಆಧಾರಿತವಾಗಿದೆ. ಸ್ವತಂತ್ರ ಸಾಕ್ಷ್ಯಗಳು ಇಲ್ಲದಿದ್ದಾಗ, ಮತ್ತು ಪೊಲೀಸ್

ಹೇಳಿಕೆಗಳೊಳಗಿನ ವೈಷಮ್ಯಗಳು ಇರುವಾಗ, ಆರೋಪಿತನ ಮೇಲೆ ನಿಸ್ಸಂಶಯವಾಗಿ ಅಪರಾಧವನ್ನು ಸ್ಥಾಪಿಸಲು ಸಾಧ್ಯವಾಗುವುದಿಲ್ಲ.

**16.** ಮೇಲಿನ ಎಲ್ಲಾ ಸಾಕ್ಷಿಗಳನ್ನು ಸಮಗ್ರವಾಗಿ ಪರಿಶೀಲಿಸಿದಾಗ, ಅಭಿಯೋಜನೆ ಪ್ರಕರಣವು ಸಂಶಯಾತೀತವಾಗಿ ಸಾಬೀತಾಗಿಲ್ಲ, ಪ್ರಮುಖ ಸಾಕ್ಷಿದಾರರು ಅಭಿಯೋಜನೆ ವಿರುದ್ಧ ನುಡಿದಿದ್ದಾರೆ, ಘಟನೆ ಸ್ಥಳ, ವಶಪಡಿಕೆ, ಮಹಜರ್, ಮಾದರಿ ಕಳುಹಿಕೆ ವಿಷಯಗಳಲ್ಲಿ ಗಂಭೀರ ವೈಪರಿತ್ಯಗಳಿವೆ.

**17.** ಮುಂದುವರಿದು ನೇರ ಸಾಕ್ಷಿಯ ಕೊರತೆ: ಆರೋಪಿತರ ವಿರುದ್ಧ ಯಾವುದೇ ಒಪ್ಪಿಗೆ ಹೇಳಿಕೆ, ಖರೀದಿ ಅಥವಾ ಮಾರಾಟ ಸಂಬಂಧಿತ ದಾಖಲೆಗಳನ್ನು ಅಭಿಯೋಜಕರು ತೋರಿಸಲಿಲ್ಲ. ಆರೋಪಿ ಪರವಾನಗಿ ಹೊಂದಿರಲಿಲ್ಲ, ಮದ್ಯವನ್ನು ಹೆಚ್ಚಿನ ಬೆಲೆಗೆ ಮಾರಾಟಕ್ಕಾಗಿ ಸಾಗಿಸುತ್ತಿದ್ದರು ಎಂಬುದನ್ನು ತನಿಖೆ ಸ್ಪಷ್ಟಪಡಿಸಲಿಲ್ಲ. ಅಲ್ಲದೆ, ಆರೋಪಿಯು ಮದ್ಯವನ್ನು ಎಲ್ಲಿಂದ ಖರೀದಿಸಿದರು ಎಂಬುದರ ಕುರಿತು ತನಿಖೆಯೇ ನಡೆದಿಲ್ಲ.

**18.** ಈ ಎಲ್ಲಾ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದಾಗ, ಘಟನೆಯ ನಿಖರತೆ ಹಾಗೂ ದೂರಿನ ಪ್ರಾಮಾಣಿಕತೆ ಬಗ್ಗೆ ನ್ಯಾಯಾಲಯಕ್ಕೆ ಗಂಭೀರ ಶಂಕೆ ಉಂಟಾಗಿದೆ. ಕ್ರಿಮಿನಲ್ ನ್ಯಾಯತಂತ್ರದಲ್ಲಿ ಸಂಶಯದ ಲಾಭವನ್ನು ಆರೋಪಿಗೆ ನೀಡಬೇಕೆಂಬುದು ಸುಪ್ರಸಿದ್ಧ ತತ್ವವಾಗಿದೆ. ಹೀಗಾಗಿ, ಆರೋಪಿ ವಿರುದ್ಧ ಅಭಿಯೋಜಕರು ಹೊರಡಿಸಿರುವ ಆಪಾದನೆಗಳನ್ನು ಸಂಶಯಾತೀತವಾಗಿ ಸಾಬೀತುಪಡಿಸಲು ಸಂಪೂರ್ಣವಾಗಿ ವಿಫಲರಾಗಿದ್ದಾರೆಂದು ತೀರ್ಮಾನಿಸಿ, ಮೇಲ್ಕಂಡ ಅಂಶ ಸಂಖ್ಯೆ-1 ಕ್ಕೆ **ನಕಾರಾತ್ಮಕವಾಗಿ** ಉತ್ತರಿಸಲಾಗುತ್ತದೆ.

**19. ಅಂಶ ಸಂಖ್ಯೆ 2**: ಈ ಮೇಲ್ಕಂಡ ಅಂಶಗಳಲ್ಲಿ ಚರ್ಚಿಸಲಾದ ಕಾರಣಗಳಿಗಾಗಿ ಈ ಅಂತಿಮ ಆದೇಶ ಈ ಕೆಳಕಂಡಂತೆಃ-

# ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 1973 ಕಲಂ 248(1) ರ ಅಡಿಯಲ್ಲಿ ಆರೋಪಿಯನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 1965 ರ ಕಲಂ 32, 34 ರ ಅಡಿಯಲ್ಲಿ ಹೂಡಲಾದ ಅಪಾದನೆಗಳಿಂದ ದೋಷಮುಕ್ತಗೊಳಿಸಿ ಖುಲಾಸೆ ಮಾಡಲಾಗಿದೆ.

ಆರೋಪಿ ಮತ್ತು ಅವರ ಜಾಮೀನುದಾರರಿಂದ ಸಲ್ಲಿಸಲಾದ ಜಾಮೀನು ಮುಚ್ಚಳಿಕೆ ಪತ್ರಗಳನ್ನು ರದ್ದುಪಡಿಸಲಾಗಿದೆ.

ಈ ಪ್ರಕರಣದಲ್ಲಿ ಗುರುತಿಸಲಾದ ಮುದ್ದೆಮಾಲುಗಳು ಯಾವುದೇ ಮೌಲ್ಯಯುತ ವಸ್ತುಗಳಲ್ಲದ ಕಾರಣ, ಮೇಲ್ಮನವಿಯ ಅವಧಿ ಮುಗಿದ ನಂತರ ಅವುಗಳನ್ನು ನಾಶಪಡಿಸಲು ಆದೇಶಿಸಲಾಗಿದೆ.

(ಶೀಘ್ರಲಿಪಿಗಾರನಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟಿದ್ದು, ಬಳಿಕ ಅನುಲಿಪಿಯನ್ನು ಪರಿಶೀಲಿಸಿ, ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ಈ ದಿನ ಅಂದರೆ ದಿನಾಂಕ 08**ನೇ ಡಿಸೆಂಬರ್** 2025 ರಂದು ಘೋಷಿಸಿದ್ದೇನೆ.)

**(ಶ್ರೀ ಪ್ರಕಾಶ್. ಸಿ.ಡಿ )**
**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ ಜೆ ಎಂ.**
**ಚಾಮರಾಜನಗರ**

## :: ಅನುಬಂಧ ::

### 1. ಅಭಿಯೋಜನಾ ಪರ ವಿಚಾರಣೆ ಮಾಡಲಾದ ಸಾಕ್ಷಿಗಳು :

ಫ್ರಾಸಾ–1 : ಸಿದ್ದಲಿಂಗಸ್ವಾಮಿ
ಫ್ರಾಸಾ–2 : ಮಹೇಂದ್ರ
ಫ್ರಾಸಾ–3 : ಗುರು
ಫ್ರಾಸಾ–4 : ರಾಜನಾಯಕ

### 2. ಅಭಿಯೋಜನಾ ಪರ ಹಾಜರು ಪಡಿಸಿದ ದಾಖಲೆಗಳು :

ನಿಶಾನೆ ಪಿ–1 : ಸ್ಥಳ ಮಹಜರ್
ನಿಶಾನೆ ಪಿ–1(ಎ) ರಿಂದ 1(ಇ): ಸಹಿಗಳು
ನಿಶಾನೆ ಪಿ–2 ಮತ್ತು 3 : ಹೇಳಿಕೆಗಳು.
ನಿಶಾನೆ ಪಿ–4 : ಸ್ವವರದಿ

| | | |
|---|---|---|
| ನಿಶಾನೆ ಪಿ–4(ಎ) ಮತ್ತು 1(ಬಿ): | | ಸಹಿಗಳು |
| ನಿಶಾನೆ ಪಿ–5 | : | ಪ್ರಾದೇಶಿಕ ವಿಧಿವಿಜ್ಞಾನ ಪ್ರಯೋಗಾಲಯದ ವರದಿ. |
| ನಿಶಾನೆ ಪಿ–5(ಎ) | : | ಸಹಿ. |
| ನಿಶಾನೆ ಪಿ–6 | : | ಪ್ರಥಮ ವರ್ತಮಾನ ವರದಿ |
| ನಿಶಾನೆ ಪಿ–7 | : | ಪತ್ರ |
| ನಿಶಾನೆ ಪಿ–7(ಎ) | : | ಸಹಿ. |
| ನಿಶಾನೆ ಪಿ–8 | : | ಸ್ವತ್ತಿನ ಪಟ್ಟಿ. |
| ನಿಶಾನೆ ಪಿ–8(ಎ) ಮತ್ತು (ಬಿ) | : | ಸಹಿಗಳು. |
| ನಿಶಾನೆ ಪಿ–9 | : | ಅಂತಿಮ ವರದಿ. |
| ನಿಶಾನೆ ಪಿ–9(ಎ) | : | ಸಹಿ |

**3. ಆರೋಪಿ ಪರ ವಿಚಾರಣೆ ಮಾಡಲಾದ ಸಾಕ್ಷಿಗಳು :**

–ಇಲ್ಲಾ–

**4. ಆರೋಪಿ ಪರ ಹಾಜರುಪಡಿಸಿದ ದಾಖಲೆಗಳು :**

–ಇಲ್ಲಾ–

**5. ಅಭಿಯೋಜನೆಯವರ ಪರ ಗುರುತಿಸಲಾದ ಮುದ್ದೆಮಾಲು ಪಟ್ಟಿ:**

ಮುದ್ದೆ ಮಾಲು ಸಂಖ್ಯೆ :1 ರಿಂದ 5 : 4 ಬ್ರಾಂದಿ ಬಾಟಲ್ ಗಳು.
ಹಾಗೂ 1 ಪ್ಲಾಸ್ಟಿಕ್ ಚೀಲ

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ ಜೆ ಎಂ.**
**ಚಾಮರಾಜನಗರ**

Visit **ecourts.gov.in** for updates or download mobile app "**eCourts Services**" from Android or iOS